**1 ನೇ ಹೆಚ್ಚುವರಿ ವ್ಯವಹಾರ ನ್ಯಾಯಾಧೀಶರು ಮತ್ತು ಪ್ರ.ದ.ನ್ಯಾಯಿಕ ದಂಡಾಧಿಕಾರಿಗಳ ನ್ಯಾಯಾಲಯ, ಸಾಗರ**

**ಸಿ.ಸಿ ಸಂಖ್ಯೆಃ 166/2023**

**ಸಿ.ಡಬ್ಲ್ಯೂ-4, ಪಿ.ಡಬ್ಲ್ಯೂ- 3**

| | | |
|---|---|---|
| ಸಾಕ್ಷಿದಾರರ ಹೆಸರು | : | ಪ್ರಕಾಶ್ ಅಂಬ್ಲಿ |
| ತಂದೆಯ ಹೆಸರು | : | ನಾಗೇಂದ್ರಪ್ಪ |
| ವಯಸ್ಸು | : | 38 ವರ್ಷ |
| ಉದ್ಯೋಗ | : | ಪೊಲೀಸ್ ಪೇದೆ, ಡಿ.ವೈ.ಎಸ್.ಪಿ. ಕಚೇರಿ, ಸಾಗರ |
| ವಾಸ | : | ಸಾಗರ |

**ಪ್ರಮಾಣೀಕರಿಸಿದ ದಿನಾಂಕ :13.07.2026.**

**ಮುಖ್ಯ ವಿಚಾರಣೆ : ಸಹಾಯಕ ಸರ್ಕಾರಿ ಅಭಿಯೋಜಕರಿಂದ**

1. ನಾನು 2017 ರಿಂದ ಜುಲೈ 2022 ರವರೆಗೆ ಸಾಗರ ಗ್ರಾಮಾಂತರ ಪೊಲೀಸ್ ಠಾಣೆಯಲ್ಲಿ ಪೊಲೀಸ್ ಪೇದೆಯಾಗಿ ಕರ್ತವ್ಯ ನಿರ್ವಹಿಸಿರುತ್ತೇನೆ.

2. ಈ ಪ್ರಕರಣಕ್ಕೆ ಸಂಬಂಧಿಸಿದಂತೆ ದಿಃ20.04.2020 ರಂದು ನಾನು ಠಾಣೆಯಲ್ಲಿದ್ದಾಗ ಬೆಳಿಗ್ಗೆ 10 ಗಂಟೆಗೆ ಚಾಸ 1 ರವರು ಸಾಗರದ ಪಟಗೊಪ್ಪ ಗ್ರಾಮದ ಕಣಿಕೆ ಗ್ರಾಮದ ಬಳಿ ಯಾರೋ ಒಬ್ಬ ವ್ಯಕ್ತಿ ಕೆ ಎ 53 ಜೆ 8295 ನೇದ್ದರ ಬೈಕಿನಲ್ಲಿ ಕಾನೂನು ಬಾಹಿರವಾಗಿ ಸ್ಫೋಟಕ ವಸ್ತುಗಳನ್ನು ಸಾಗಿಸುತ್ತಿದ್ದಾನೆಂದು ಮಾಹಿತಿ ಬಂದಿದ್ದು, ಸದರಿ ಮಾಹಿತಿಯನ್ನು ಚಾಸ 1 ನನಗೂ ತಿಳಿಸಿದರು. ನಂತರ ದಾಳಿಗೆ ಹೋಗುವುದಿದೆ ಎಂದು ಹೇಳಿದರು. ಬೆಳಿಗ್ಗೆ 10.15 ಕ್ಕೆ ಇಲಾಖಾ ವಾಹನದಲ್ಲಿ ನಾನು ಮತ್ತು ಚಾಸ 1 ಇಬ್ಬರೂ ದಾಳಿಗೆಂದು ಹೊರಟೆವು. ಬೆಳಿಗ್ಗೆ 10.40 ಗಂಟೆಯ ಸಮಯದಲ್ಲಿ ಗಿಣಿವಾರ ಗ್ರಾಮದ ಸರ್ಕಲ್ ಬಳಿ ಚಾಸ 1 ರವರು ನನಗೆ ಇಬ್ಬರು ಪಂಚರನ್ನು ಕರೆದುಕೊಂಡು ಬರುವಂತೆ ತಿಳಿಸಿದರು. ಗಿಣಿವಾರ ಸರ್ಕಲ್ ಬಳಿ ನಿಂತಿದ್ದ ಚಾಸ 2 ಮತ್ತು 3 ರವರನ್ನು ಕರೆದು ಅವರನ್ನು ಚಾಸ 1 ರವರ ಮುಂದೆ ಹಾಜರುಪಡಿಸಿದೆ. ಚಾಸ 1 ರವರು, ಚಾಸ 2 ಮತ್ತು 3 ರವರಿಗೆ ದಾಳಿಗೆ ಸಹಕರಿಸುವಂತೆ ಕೋರಿ ನೋಟೀಸನ್ನು ನೀಡಿದರು, ಅವರು ಒಪ್ಪಿದ ನಂತರ ಅವರನ್ನು ಕರೆದುಕೊಂಡು ಹೊರಟೆವು.

3. ಪಟಗುಪ್ಪ ಗ್ರಾಮಕ್ಕೆ ಹೋಗುವ ಕ್ರಾಸ್ ಬಳಿ ಹೋಗುತ್ತಿದ್ದಾಗ ಸಮಯ ಬೆಳಿಗ್ಗೆ 11.15 ಗಂಟೆಗೆ ನಮ್ಮ ಇಲಾಖಾ ವಾಹನವನ್ನು ನೋಡಿ ಕಣಿಕೆ ಗ್ರಾಮದ ಕಡೆಯಿಂದ ದ್ವಿ ಚಕ್ರ ವಾಹನದಲ್ಲಿ ಬರುತ್ತಿದ್ದ ವ್ಯಕ್ತಿ ನಮ್ಮನ್ನು ನೋಡಿ ಬೈಕ್ ಹಾಗೂ ಬೈಕ್ ನ

ಮುಂಭಾಗದಲ್ಲಿದ್ದ ಪ್ಲಾಸ್ಟಿಕ್ ಚೀಲವನ್ನು ಬಿಟ್ಟು ಓಡಿ ಹೋದನು. ಆ ವ್ಯಕ್ತಿಯನ್ನು ಹಿಡಿಯಲು ಪ್ರಯತ್ನಿಸಿದರೂ ಸಹ ಆತ ಸಿಗಲಿಲ್ಲ, ಆತ ಕಾಡಿನೊಳಗೆ ಓಡಿ ಹೋದ. ನಂತರ ಚಾಸ 1 ರವರು ಪಂಚರ ಸಮಕ್ಷಮ ಆ ವ್ಯಕ್ತಿ ಬಿಟ್ಟು ಹೋಗಿದ್ದ ಬೈಕ್ ಮತ್ತು ಚೀಲವನ್ನು ಪರಿಶೀಲಿಸಿದಾಗ ಬೈಕ್ ಸಂಖ್ಯೆ ಕೆ ಎ 53/8259 ನೇದ್ದರ ಕಪ್ಪು ಬಣ್ಣದ ಹೋಂಡಾ ಸ್ಪ್ಲೆಂಡರ್ ಬೈಕ್ ಆಗಿತ್ತು. ಚೀಲವನ್ನು ಪರಿಶೀಲಿಸಿದಾಗ ಅದರೊಳಗೆ ಕೊಳವೆಯಾಕಾರದ 3 ರೀತಿಯ ಟ್ಯೂಬ್ ಕವರ್ ಗಳಿದ್ದವು. ಒಂದು ಟ್ಯೂಬ್ ನ ಹೆಸರು ಅಫೆಕ್ಸ್ 90 ಎಕ್ಸ್ ಪ್ಲೋಸೀವ್ ಎಂದು ಇತ್ತು. ಈ ರೀತಿಯಾಗಿ ಅಫೆಕ್ಸ್ 90 ಎಕ್ಸ್ ಪ್ಲೋಸೀವ್ ಎಂಬ ಹೆಸರಿನ 171 ಟ್ಯೂಬ್ ಗಳಿದ್ದವು. ವಿಷ್ಣು ಪವರ್ 90 ಎಂಬ ಹೆಸರಿನ 27 ಟ್ಯೂಬ್ ಗಳಿದ್ದವು. ಐಡಿಯಲ್ ಪವರ್ 90 ಎಂಬ ಹೆಸರಿನ 202 ಟ್ಯೂಬ್ ಗಳಿದ್ದವು. ಸದರಿ ಟ್ಯೂಬ್ ಗಳನ್ನು ಜಿಲೇಟಿನ್ ಕಡ್ಡಿಗೆ ಸೇರಿಸಿ ಬಂಡೆ ಕಲ್ಲುಗಳನ್ನು ಸ್ಫೋಟಿಸಲು ಉಪಯೋಗಿಸುವಂತದ್ದಾಗಿತ್ತು. ಸ್ಥಳೀಯರ ಬಳಿ ಆ ಓಡಿ ಹೋದ ವ್ಯಕ್ತಿ ಯಾರು ಎಂದು ಕೇಳಿದಾಗ ಆ ವ್ಯಕ್ತಿ ಯಾರು ಎಂದು ತಮಗೆ ಗೊತ್ತಿಲ್ಲ ಎಂದು ತಿಳಿಸಿದರು. ನಂತರ ಚಾಸ 1 ರವರು ಸದರಿ ಸ್ಫೋಟಕಗಳನ್ನು ಜಪ್ತುಪಡಿಸಿಕೊಂಡು ಪಂಚನಾಮೆಯ ಕ್ರಮವನ್ನು ಬೆಳಿಗ್ಗೆ 11.30 ರಿಂದ 12.45 ರವರೆಗೆ ಜರುಗಿಸಿದರು. ಜಪ್ತುಪಡಿಸಿಕೊಂಡ 3 ಕಂಪನಿಯ ಟ್ಯೂಬ್ ಗಳಲ್ಲಿ ತಲಾ 1 ರಂತೆ ಮಾದರಿಗೆಂದು ಕಾಯ್ದಿರಿಸಿದರು. ಜಪ್ತುಪಡಿಸಿಕೊಂಡ ಮಾದರಿಗಳಿಗೆ ಸೀಲ್ ಮಾಡಿ ಪಂಚರ ಸಹಿ ಪಡೆದವು. ನಂತರ ಚಾಸ 1 ರವರು ಠಾಣೆಗೆ ಹಿಂದಿರುಗಿ ಸ್ವ ಪಿರ್ಯಾದನ್ನು ದಾಖಲಿಸಿದರು.

4. ಸಾಕ್ಷಿಯು ನಿಪಿ 1 ರ ಮೇಲಿರುವ ತಮ್ಮ ಸಹಿಯನ್ನು ನೋಡಿ ಗುರುತಿಸಿದ್ದು, ಸಾಕ್ಷಿಯ ಸಹಿಯನ್ನು ನಿಪಿ 1(ಸಿ) ಎಂದು ಗುರುತಿಸಲಾಯಿತು. ಸಾಕ್ಷಿಯು ನಿಪಿ 2 ರಿಂದ 5 ರಲ್ಲಿ ತಮ್ಮ ಇರುವಿಕೆಯನ್ನು ನೋಡಿ ಗುರುತಿಸಿರುತ್ತಾರೆ. ಆ ದಿನ ಓಡಿ ಹೋದ ವ್ಯಕ್ತಿಯನ್ನು ನೋಡಿದರೆ ಗುರುತಿಸುತ್ತೇನೆ. (ಆರೋಪಿಯು ಗೈರ ಹಾಜರಿದ್ದು, ಆರೋಪಿ ಪರ ವಕೀಲರು ಆರೋಪಿಯ ಗುರುತಿಸುವಿಕೆಗೆ ಯಾವುದೇ ತಕರಾರು ಇಲ್ಲವೆಂದು ನಿವೇದಿಸಿಕೊಂಡಿರುತ್ತಾರೆ.

<u>ಪಾಟೀ ಸವಾಲುಃ- ಆರೋಪಿ ಪರ ಶ್ರೀ ಐ.ಎನ್.ಎಸ್. ವಕೀಲರಿಂದ</u>

1. ಮಾಹಿತಿ ಬಂದ ತಕ್ಷಣ ಚಾಸ 1 ಪ್ರಕರಣವನ್ನು ದಾಖಲಿಸಿರುವುದಿಲ್ಲ.

ಘಟನಾ ಸ್ಥಳ ನಮ್ಮ ಠಾಣೆಯಿಂದ 20 ಕಿ ಮೀ ಅಂತರದಲ್ಲಿರುತ್ತದೆ. ನಾವು ದಾಳಿಗೆ ಹೋದ ದಿನ ಇಲಾಖಾ ವಾಹನವನ್ನು ಯಾರು ಚಲಾಯಿಸುತ್ತಿದ್ದರು ಎಂದು ನನಗೆ ನೆನಪಿಲ್ಲ. ಪಂಚರು ಸಿಕ್ಕ ಸ್ಥಳದಿಂದ ದಾಳಿ ಮಾಡಿದ ಸ್ಥಳ 7 ಕಿ ಮೀ ಅಂತರದಲ್ಲಿರುತ್ತದೆ. ಸ್ಥಳೀಯರನ್ನು ನಾವು ಪಂಚರಾಗಿ ಕರೆದಿರುವುದಿಲ್ಲ. ವ್ಯಕ್ತಿ ನಮ್ಮನ್ನು ನೋಡಿದ ಸ್ಥಳದ ಚೆಕ್ಕುಬಂಧಿಃ- ಪೂರ್ವಕ್ಕೆ ಪಟಗುಪ್ಪಕ್ಕೆ ಹೋಗುವ ರಸ್ತೆ, ಪಶ್ಚಿಮಕ್ಕೆ - ರಾಜೇಂದ್ರ ಗೌಡರ ರವರ ವಾಸದ ಮನೆ, ಉತ್ತರಕ್ಕೆ - ಹುಲಿದೇವರಬನಕ್ಕೆ ಹೋಗುವ ರಸ್ತೆ ಮತ್ತು ದಕ್ಷಿಣಕ್ಕೆ- ಕಣಿಕೆ ಗ್ರಾಮಕ್ಕೆ ಹೋಗುವ ರಸ್ತೆ ಇರುತ್ತದೆ. ನಾವು ಪಂಚನಾಮೆ ಮಾಡಿದ ಸ್ಥಳದ ಚೆಕ್ಕುಬಂಧಿಯೂ ಸಹ ಇದೇ ಆಗಿರುತ್ತದೆ. ಜೀಪನ್ನು ನೋಡಿದಾಗ ಆ ವ್ಯಕ್ತಿ 100 ಮೀಟರ್ ದೂರದಲ್ಲಿ ಓಡಿ ಹೋದ.

2. 100 ಮೀಟರ್ ಎಂದರೆ 250 ಅಡಿ ಆಗಿರುತ್ತದೆ. ಸರ್ಕಲ್ ನ ವಿಸ್ತೀರ್ಣ ಎಷ್ಟು ಎಂದು ನನಗೆ ಗೊತ್ತಿಲ್ಲ. ಸ್ಫೋಟಕಗಳ ಸಾಗಾಟದ ಮಾಹಿತಿ ಬಂದ ತಕ್ಷಣ ಚಾಸ 1 ಜಿಲ್ಲಾ ಬಾಂಬ್ ನಿಷ್ಕ್ರಿಯ ದಳಕ್ಕೆ ಮಾಹಿತಿ ನೀಡಿದರೋ ಇಲ್ಲವೋ ಗೊತ್ತಿಲ್ಲ. ಚಾಸ 1 ದಾಳಿ ಮಾಡಿದ ನಂತರ ಬಾಂಬ್ ನಿಷ್ಕ್ರಿಯ ದಳವನ್ನು ಸ್ಥಳಕ್ಕೆ ಕರೆಸಲಿಲ್ಲ. ಆ ಪ್ರದೇಶದಲ್ಲಿ ಕಲ್ಲು ಕ್ವಾರೆಗಳು ಇವೆಯೇ ಎಂದು ಚಾಸ 1 ರವರು ವಿಚಾರಣೆ ಮಾಡಿರುವುದಿಲ್ಲ. ಟ್ಯೂಬ್ ಗಳು ಅಧಿಕೃತವಾಗಿ ಅಂಗಡಿಯಲ್ಲಿ ಮಾರಾಟವಾಗುವ ವಸ್ತುಗಳು ಎಂದರೆ ನನಗೆ ಮಾಹಿತಿ ಇಲ್ಲ. ಚಾಸ 1 ಟ್ಯೂಬ್ ಗಳು ಎಲ್ಲಿಂದ ಮಾರಾಟವಾಗಿವೆ ಎಂದು ಸ್ಥಳದಲ್ಲಿ ತಿಳಿದುಕೊಳ್ಳುವ ಪ್ರಯತ್ನ ಮಾಡಲಿಲ್ಲ. ಓಡಿ ಹೋದ ವ್ಯಕ್ತಿಯ ಮುಖ ಚಹರೆ ಮತ್ತು ಆತನ ಬಟ್ಟೆಯನ್ನು ನಾವು ಸರಿಯಾಗಿ ನೋಡಲಿಲ್ಲ. ಬೈಕಿನ ಇಂಜಿನ್ ನಂಬರ್ ಅನ್ನು ನಾವು ಪಡೆಯಲಿಲ್ಲ, ಬೈಕ್ ಗೆ ನಂಬರ್ ಇತ್ತು.

3. ಸೀಲನ್ನು ಪಂಚರಿಗೆ ನಾವು ನೀಡಲಿಲ್ಲ. ಪಂಚನಾಮೆಗೆ ವಾಹನ ಚಾಲಕರ ಸಹಿಯನ್ನು ಪಡೆಯಲಿಲ್ಲ. ನಾವು ಸ್ಥಳಕ್ಕೆ ಹೋಗಿ ದಾಳಿ ಮಾಡದೇ ಇದ್ದರೂ ದಾಳಿ ಮಾಡಿದ್ದೇವೆಂದು ಸುಳ್ಳು ಸಾಕ್ಷಿ ನುಡಿಯುತ್ತಿದ್ದೇನೆಂದರೆ ಸರಿಯಲ್ಲ. ನನ್ನ ಮೇಲಾಧಿಕಾರಿಗಳ ಮಾತನ್ನು ಕೇಳಿಕೊಂಡು ಸುಳ್ಳು ಸಾಕ್ಷಿ ನುಡಿಯುತ್ತಿದ್ದೇನೆಂದರೆ ಸರಿಯಲ್ಲ.

<u>ಮರು ವಿಚಾರಣೆಃ ಇಲ್ಲ</u>

(ತೆರೆದ ನ್ಯಾಯಾಲಯದಲ್ಲಿ ನನ್ನ ಉಕ್ತಲೇಖನದ ರೀತ್ಯಾ ಗಣಕೀಕರಿಸಲಾಯ್ತು)

**ಓದಿ ಹೇಳಿ ಕೇಳಿ ಸರಿ ಇದೆ**

**1** ನೇ ಹೆಚ್ಚುವರಿ ವ್ಯವಹಾರ ನ್ಯಾಯಾಧೀಶರು
ಮತ್ತು ಪ್ರ.ದ.ನ್ಯಾಯಿಕ ದಂಡಾಧಿಕಾರಿಗಳು,
ಸಾಗರ.